ಓ.ಎಸ್. ನಂಃ 68/2012

ಡಿ.ಡಬ್ಲುಃ 01

ದಿನಾಂಕಃ 20-12-2018 ರಂದು ಮುಖ್ಯವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ಪ್ರಮಾಣ ಪತ್ರದಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿದ್ದೇನೆ.

ಪಾಟೀಸವಾಲುಃ ವಾದಿ ಪರ - ಶ್ರೀ ಟಿ.ಎಂ. ವಕೀಲರಿಂದ.

ನನ್ನ ತಂದೆಯ ಹೆಸರು ರಾಮಣ್ಣ, ತಾಯಿಯ ಹೆಸರು ಸತ್ಯಮ್ಮ ಇರುತ್ತದೆ. ನನ್ನ ತಂದೆ-ತಾಯಿಗೆ ನಾಲ್ಕು ಜನ ಗಂಡುಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳಿರುತ್ತಾರೆ. ಅವರೆಂದರೆ, ಕೆಂಚಪ್ಪ, ಪರಸಪ್ಪ, ರಾಮಪ್ಪ, ಮೂಕಣ್ಣ, ನಾನು, ಶಾಂತಮ್ಮ ಮತ್ತು ಈರಮ್ಮ ಇರುತ್ತೇವೆ. 05ನೇ ಪ್ರತಿವಾದಿ ನನಗೆ ತಮ್ಮ ಎಂದರೆ ಸರಿ. 05ನೇ ಪ್ರತಿವಾದಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತೇನೆ ಎಂದರೆ ಸರಿ. ವಾದಿಯರು 05ನೇ ಪ್ರತಿವಾದಿಯ ಮಕ್ಕಳಿರುತ್ತಾರೆ ಎಂದರೆ ಸರಿ. 01 ರಿಂದ 05ನೇ ಪ್ರತಿವಾದಿಯರು ಜಂಟಿ ಕುಟುಂಬದಲ್ಲಿ ವಾಸವಿರುತ್ತಾರೆ ಎಂದರೆ ಸರಿ.

2. ದಾವಾ ಆಸ್ತಿ 50 ಎಕರೆ ಜಮೀನು ಮತ್ತು ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಜಮೀನಿನಲ್ಲಿ 600 ತೆಂಗಿನಮರಗಳಿರುತ್ತವೆ ಎಂದರೆ ಸರಿ. 01 ರಿಂದ 05ನೇ ಪ್ರತಿವಾದಿಯರಿಗೆ ಒಂದು ಟ್ರ್ಯಾಕ್ಟರ್, ಕೋಳಿ ಫಾರಂ, 200 ಕುರಿಗಳು ಮತ್ತು 06 ಎತ್ತುಗಳು ಇರುತ್ತವೆ. 01 ಮತ್ತು 05ನೇ ಪ್ರತಿವಾದಿಯರು ಜಂಟಿ ಕುಟುಂಬದ ಆಸ್ತಿಯಿಂದ ಕೆಲವೊಂದು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಮಾಡಿದ ನಂತರ ತಮ್ಮ ಹೆಸರಿಗೆ ನೋಂದಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಸಮಪಾಲು ಇರುತ್ತದೆ ಎಂದರೆ ಸರಿ.

3. 05ನೇ ಪ್ರತಿವಾದಿಯ ಮಕ್ಕಳಾದ ವಾದಿಯರನ್ನು 05ನೇ ಪ್ರತಿವಾದಿಯು ನೋಡಿಕೊಳ್ಳದ ಕಾರಣ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.